# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು–560003

ಸಂಖ್ಯೆ: ಸಿ.ಎಸ್1/ ಗ.ಶಾ/ಎಸ್.ಎಸ್.ಎಲ್.ಸಿ/ಶಾ.ಮಾ/01/2022-23 ದಿನಾಂಕ: 18-07-2022

## ಸುತ್ತೋಲೆ

**ವಿಷಯ: ಮಂಡಳಿಯ ಶಾಲಾ ಲಾಗಿನ್‌ನಲ್ಲಿ ಶಾಲಾ ಮಾಹಿತಿಯನ್ನು ಪರಿಷ್ಕರಣೆ ಮಾಡುವ ಬಗ್ಗೆ.**

ಮಂಡಳಿಯಿಂದ ಶಾಲಾ ಸಂಕೇತ ಪಡೆದಿರುವ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯ ಶಿಕ್ಷಕರು ಮಂಡಳಿಯ ಶಾಲಾ ಲಾಗಿನ್‌ನಲ್ಲಿ ಶಾಲಾ ಮಾಹಿತಿಯನ್ನು ಪರಿಷ್ಕರಣೆ ಮಾಡಲು ದಿನಾಂಕ: **18-07-2022** ರಿಂದ ಅವಕಾಶ ಕಲ್ಪಿಸಲಾಗಿದೆ.

ಮಂಡಳಿಯ ಜಾಲತಾಣ https://sslc.karnataka.gov.in/ ನ ಶಾಲಾ ಲಾಗಿನ್‌ನಲ್ಲಿ ಶಾಲಾ ಮಾಹಿತಿ ಪುಟ ಲಭ್ಯವಿದ್ದು ಈ ಕೆಳಕಂಡ ಸೂಚನೆಗಳನ್ವಯ ಶಾಲೆಯ ಇತ್ತೀಚಿನ ಮಾಹಿತಿಯನ್ನು ಪರಿಷ್ಕರಣೆ ಮಾಡಲು ಸೂಚಿಸಿದೆ. ಸದರಿ ಮಾಹಿತಿಯನ್ನು ಪರಿಷ್ಕರಿಸಿ submit ಮಾಡಿದರೆ ಮಾತ್ರ ಶಾಲಾ ಲಾಗಿನ್‌ನಲ್ಲಿನ ಇತರ ಮೆನುಗಳು display ಆಗುತ್ತವೆ.

1. **KSEEB School Code**

   ಸದರಿ ಶಾಲೆಗೆ ಮಂಡಳಿಯಿಂದ ನೀಡಲಾಗಿರುವ ಶಾಲಾ ಸಂಕೇತ display ಆಗುತ್ತದೆ.

2. **U DISE Code**
   - ಶಾಲೆಯ U DISE ಸಂಕೇತವನ್ನು display ಮಾಡಲಾಗಿದ್ದು ಅದರ ಮುಂದೆ Correct ಮತ್ತು Incorrect ಎಂಬ ಎರಡು ಆಯ್ಕೆಗಳಿರುತ್ತವೆ.
   - Display ಆಗುತ್ತಿರುವ U DISE ಸಂಕೇತ ಸರಿ ಇದ್ದರೆ Correct ಬಟನ್ ಮೇಲೆ ಕ್ಲಿಕ್ ಮಾಡಬೇಕು. ಆಗ ಮುಂದೆ ಇರುವ text box ನಲ್ಲಿ U DISE ಸಂಕೇತ display ಆಗುತ್ತದೆ.
   - Display ಆಗುತ್ತಿರುವ U DISE ಸಂಕೇತ ಸರಿಯಾಗಿಲ್ಲದಿದ್ದರೆ Incorrect ಬಟನ್ ಮೇಲೆ ಕ್ಲಿಕ್ ಮಾಡಬೇಕು. ನಂತರ ಮುಂದೆ ಇರುವ text box ನಲ್ಲಿ ಸರಿಯಾದ U DISE ಸಂಕೇತವನ್ನು ನಮೂದಿಸಬೇಕು.
3. **School name**
4. **Address**
5. **Pincode**
   - ಶಾಲೆಯ U DISE ಸಂಕೇತವನ್ನು ನಮೂದಿಸಲು ಸೂಚಿಸಿರುವಂತೆಯೇ ಶಾಲೆಯ ಹೆಸರು (Name & spelling), ಶಾಲೆಯ ವಿಳಾಸ ಮತ್ತು ಪಿನ್ ಕೋಡನ್ನು ಪರಿಶೀಲಿಸಿ ಸೂಕ್ತ ಬಟನ್ ಆಯ್ಕೆ ಮಾಡಿ ಮುಂದುವರೆಯುವುದು.
6. **School management**
   - ಶಾಲೆಯ ವಿಧವನ್ನು display ಮಾಡಲಾಗಿದ್ದು ಅದರ ಮುಂದೆ Correct ಮತ್ತು Incorrect ಎಂಬ ಎರಡು ಆಯ್ಕೆಗಳಿರುತ್ತವೆ.
   - Display ಆಗುತ್ತಿರುವ ಶಾಲೆಯ ವಿಧ ಸರಿ ಇದ್ದರೆ Correct ಬಟನ್ ಮೇಲೆ ಕ್ಲಿಕ್ ಮಾಡಬೇಕು. ಆಗ ಮುಂದೆ ಇರುವ text box ನಲ್ಲಿ ಶಾಲೆಯ ವಿಧ display ಆಗುತ್ತದೆ.

- Display ಆಗುತ್ತಿರುವ ಶಾಲೆಯ ವಿಧ ಸರಿಯಾಗಿಲ್ಲದಿದ್ದರೆ Incorrect ಬಟನ್ ಮೇಲೆ ಕ್ಲಿಕ್ ಮಾಡಬೇಕು. ನಂತರ ಮುಂದೆ ನೀಡಲಾಗಿರುವ ವಿಧಗಳಲ್ಲಿ (Government/ Aided/ Private Unaided) ಸರಿಯಾದುದನ್ನು ಆಯ್ಕೆ ಮಾಡಬೇಕು.

7. **Area**

- ಶಾಲೆಯ ವಿಧವನ್ನು ನಮೂದಿಸಲು ಸೂಚಿಸಿರುವಂತೆಯೇ ಶಾಲಾ ಪ್ರದೇಶವನ್ನು display ಮಾಡಲಾಗಿದ್ದು ಪರಿಶೀಲಿಸಿ ಸೂಕ್ತ ಬಟನ್ (Urban/Rural) ಆಯ್ಕೆ ಮಾಡಿ ಮುಂದುವರೆಯುವುದು.

8. **Special school**

- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಬೋಧಿಸುವುದಕ್ಕಾಗಿಯೇ ಇರುವ ವಿಶೇಷ ಶಾಲೆಯಾಗಿದ್ದರೆ **Special school** ಆಯ್ಕೆ ಮಾಡಬೇಕು.
- ಶಾಲೆಯು **Special** ಶಾಲೆಯೇ, ಅಲ್ಲವೇ ಎಂದು display ಮಾಡಲಾಗಿದ್ದು ಅದರ ಮುಂದೆ Correct ಮತ್ತು Incorrect ಎಂಬ ಎರಡು ಆಯ್ಕೆಗಳಿರುತ್ತವೆ.
- Display ಆಗುತ್ತಿರುವ ಮಾಹಿತಿ ಸರಿ ಇದ್ದರೆ Correct ಬಟನ್ ಮೇಲೆ ಕ್ಲಿಕ್ ಮಾಡಬೇಕು. ಆಗ ಮುಂದೆ ಇರುವ text box ನಲ್ಲಿ ಹೌದು/ಇಲ್ಲ ಎಂದು display ಆಗುತ್ತದೆ.
- Display ಆಗುತ್ತಿರುವ ಮಾಹಿತಿ ಸರಿಯಾಗಿಲ್ಲದಿದ್ದರೆ Incorrect ಬಟನ್ ಮೇಲೆ ಕ್ಲಿಕ್ ಮಾಡಬೇಕು. ನಂತರ ಮುಂದೆ ನೀಡಲಾಗಿರುವ ಆಯ್ಕೆಗಳಲ್ಲಿ (Yes/No) ಸರಿಯಾದುದನ್ನು ಆಯ್ಕೆ ಮಾಡಬೇಕು.

9. **Residential School**
10. **JTS School**
11. **NSQF School**

- ಶಾಲೆಯು **Special** ಶಾಲೆಯೇ, ಅಲ್ಲವೇ ಎಂದು ನಮೂದಿಸಲು ಸೂಚಿಸಿರುವಂತೆಯೇ, ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಒದಗಿಸಿದ್ದರೆ **Residential School** ಎಂದೂ, **JTS** ವಿಷಯಗಳನ್ನು ಬೋಧಿಸುತ್ತಿದ್ದರೆ **JTS school** ಎಂದೂ, **NSQF** ವಿಷಯಗಳನ್ನು ಬೋಧಿಸುತ್ತಿದ್ದರೆ **NSQF school** ಎಂದು ಪರಿಗಣಿಸಿ ಸೂಕ್ತ ಬಟನ್ ಆಯ್ಕೆ ಮಾಡಿ ಮುಂದುವರೆಯುವುದು.

12. **HM mobile number**

- ಶಾಲೆಯ U DISE ಸಂಕೇತವನ್ನು ನಮೂದಿಸಲು ಸೂಚಿಸಿರುವಂತೆಯೇ ಶಾಲೆಯ ಈಗಿನ ಮುಖ್ಯ ಶಿಕ್ಷಕರ ಮೊಬೈಲ್ ಸಂಖ್ಯೆಯನ್ನು ಪರಿಶೀಲಿಸಿ ಸೂಕ್ತ ಬಟನ್ ಆಯ್ಕೆ ಮಾಡಿ ನಮೂದಿಸುವುದು.

13. **Submit**

- ಅಂತಿಮವಾಗಿ ಮತ್ತೊಮ್ಮೆ ಎಲ್ಲಾ ಮಾಹಿತಿಯು ಸರಿಯಾಗಿದೆಯೇ ಎಂದು ಪರಿಶೀಲಿಸಿ **Submit** ಬಟನ್ ಒತ್ತುವುದರ ಮೂಲಕ ಶಾಲಾ ಮಾಹಿತಿಯ ಪರಿಷ್ಕರಣೆಯನ್ನು ಪೂರ್ಣಗೊಳಿಸುವುದು.

ಆಯಾ ಶಾಲೆಯ ಮುಖ್ಯಸ್ಥರು ದಿನಾಂಕ **23-07-2022**ರೊಳಗೆ ತಮ್ಮ ಶಾಲೆಯ ಮಾಹಿತಿಯನ್ನು ಪರಿಷ್ಕರಿಸುವ ಕಾರ್ಯವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ತಿಳಿಸಿದೆ.

(ಗೋಪಾಲಕೃಷ್ಣ. ಹೆಚ್.ಎನ್.) 19/7/2022
ನಿರ್ದೇಶಕರು, (ಪರೀಕ್ಷೆಗಳು)

ಅಗತ್ಯ ಕ್ರಮಕ್ಕಾಗಿ :

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ.